7/8/17



# ವಿದ್ಯುತ್ ಚಾಲಿತ ಟ್ರ್ಯಾಕ್ಟರ್

ಕೃಷಿ ಸಲಕರಣೆ ತಯಾರಿಕಾ ಸಂಸ್ಥೆ ಎಸ್ಕಾರ್ಟ್ಸ್, 22 ಎಚ್‌ಪಿಯಿಂದ 90 ಎಚ್‌ಪಿವರೆಗಿನ ಟ್ರ್ಯಾಕ್ಟರ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನಿಖಿಲ್ ನಂದಾ ಅವರು ಬುಧವಾರ ದೇಶದ ಮೊದಲ ವಿದ್ಯುತ್‌ಚಾಲಿತ ಟ್ರ್ಯಾಕ್ಟರ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದ್ದಾರೆ. ಸಂಸ್ಥೆಯು ಇದರ ಮಾರಾಟ ಬೆಲೆಯನ್ನು ಇನ್ನೂ ನಿಗದಿಪಡಿಸಿಲ್ಲ.

# ಸಾಹಿತ್ಯ, ಆಧ್ಯಾತ್ಮಿಕ ಕಾರ್ಯಕ್ರಮ

ಬೆಂಗಳೂರು: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘವು ಆನಂದರಾವ್ ವೃತ್ತದ ಬಳಿ ಇರುವ ಬೆಳ್ಳಿಭವನ ಕಟ್ಟಡದಲ್ಲಿ ಪ್ರತಿ ತಿಂಗಳು ಎರಡನೇ ಶನಿವಾರ ಸಾಹಿತ್ಯ, ಸಂಗೀತ, ಆರೋಗ್ಯ ಹಾಗೂ ಅಧ್ಯಾತ್ಮ ಕಾರ್ಯಕ್ರಮ ಆಯೋಜಿಸಲಿದೆ. ಸೆ.9ರ ಬೆಳಗ್ಗೆ 11ಕ್ಕೆ ವಿಜಯವಾಣಿ ಅಂಕಣಕಾರ, ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಂದ ಕೆ.ಎಸ್. ನರಸಿಂಹಸ್ವಾಮಿ ಸಾಹಿತ್ಯ ಕುರಿತು ಉಪನ್ಯಾಸವಿದೆ. ಮಧ್ಯಾಹ್ನ 12ಕ್ಕೆ ಗಾಯಕಿ ವಾಣಿಶ್ರೀ ಹೆಗಡೆ ಅವರಿಂದ ಶಾಸ್ತ್ರೀಯ, ಭಕ್ತಿ ಸಂಗೀತ ನಡೆಯಲಿದೆ.

**» ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘದಿಂದ ಆಯೋಜನೆ**

2.30ರಿಂದ 3.30ರವರೆಗೆ ಹೃದಯ ಶಸ್ತ್ರಚಿಕಿತ್ಸಕ ಡಾ. ದಿವಾಕರ ಭಟ್ ಅವರಿಂದ 'ನನ್ನ ಹೃದಯ' ಕುರಿತು ಸಚಿತ್ರ ವಿವರಣಾ ಕಾರ್ಯಕ್ರಮ ಇರಲಿದೆ. ಬಳಿಕ ಚಿಂತಕ ಎಂ.ಆರ್. ವಿಷ್ಣುಮೂರ್ತಿ ಅವರು ಶ್ರೀ ಶಂಕರಾಚಾರ್ಯರ ಮೋಹ ಮುದ್ಗರ ಬಗ್ಗೆ ಆಧ್ಯಾತ್ಮಿಕ ಪ್ರವಚನ ನೀಡಲಿದ್ದಾರೆ. ಎಲ್ಲ ಕಾರ್ಯಕ್ರಮಕ್ಕೆ ಉಚಿತ ಪ್ರವೇಶ ಇರಲಿದ್ದು, ಸಾರ್ವಜನಿಕರು ಕಾರ್ಯಕ್ರಮದ ಪ್ರಯೋಜನ ಪಡೆಯುವಂತೆ ಸಂಘದ ಅಧ್ಯಕ್ಷ ಜಿ. ಮಂಜಪ್ಪ ಕೋರಿದ್ದಾರೆ.

Page 1

# ಅಪಾಯಕಾರಿ ವಿದ್ಯುತ್ ಕಂಬ



ಆರ್.ಬಿ.ಐ. ಲೇಔಟ್ ಸಮೀಪದ ತೇಜಸ್ವಿ ಅಪಾರ್ಟ್‌ಮೆಂಟ್ ಎದುರು ವಿದ್ಯುತ್ ಕಂಬ ಅಪಾಯಕಾರಿ ಸ್ಥಿತಿಯಲ್ಲಿದೆ. ಇತ್ತೀಚೆಗೆ ಸುರಿದ ಮಳೆಯಿಂದಾಗಿ ನೀರು ಹರಿದು ಬುಡದಲ್ಲಿ ಭಾರಿ ಹೊಂಡ ನಿರ್ಮಾಣವಾಗಿದೆ. ರಸ್ತೆ ಪಕ್ಕದಲ್ಲೇ ಕಂಬವಿದೆ, ಅಲ್ಲದೆ ಸುತ್ತಮುತ್ತ ಹಲವು ವ್ಯಾಪಾರಿ ಮಳಿಗೆಗಳಿವೆ. ಅಪಾಯ ಸಂಭವಿಸುವ ಮುನ್ನ ಬೆಸ್ಕಾಂ ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

• **ಎಸ್. ಶ್ರೀನಾಥ್** ಆರ್.ಬಿ.ಐ. ಲೇಔಟ್